**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 16-01-2024.**

**ಪಾಟೀ ಸವಾಲು - ವಾದಿ ಪರ ವಕೀಲರಿಂದ :**

**1)** ನಾನು ಈ ದಾವೆಯಲ್ಲಿ ನಮ್ಮ ಪರವಾಗಿ ಹಾಗೂ ನಮ್ಮ ಮಾರಾಟಗಾರರಾದ 10 ರಿಂದ 12 ನೇ ಪ್ರತಿವಾದಿಗಳ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆ. 10 ರಿಂದ 12 ನೇ ಪ್ರತಿವಾದಿಗಳು ನಮ್ಮ ಪರವಾಗಿ ಯಾವುದೇ ಅಧಿಕಾರ ಪತ್ರವನ್ನು ನೀಡಿರುವುದಿಲ್ಲ, ಕೇವಲ ಕ್ರಯಪತ್ರವನ್ನು ಮಾತ್ರ ಜಾರಿ ಮಾಡಿಕೊಟ್ಟಿರುತ್ತಾರೆ. ನಾನು ಅವರು ಜಾರಿಮಾಡಿಕೊಟ್ಟಿರುವ ದಾಖಲಾತಿಗಳ ಆಧಾರದ ಮೇಲೆ ಸಾಕ್ಷಿ ನುಡಿಯುತ್ತಿದ್ದೇನೆ, ಅವರಿಂದ ಯಾವುದೇ ಮಾಹಿತಿಯನ್ನು ಪಡೆದುಕೊಂಡಿರುವುದಿಲ್ಲ. 10 ರಿಂದ 12 ನೇ ಪ್ರತಿವಾದಿಗಳು ದಾವಾ ಸ್ವತ್ತುಗಳನ್ನು ಖರೀದಿಸುವಾಗ ದಾವಾ ಐಟಂ ಸಂಖ್ಯೆ 1 ರಿಂದ 4 ನ್ನು ಖರೀದಿಸುವಾಗ ಯಾವ ರೀತಿಯ ಕ್ರಮ ಕೈಗೊಂಡಿದ್ದರು ಎಂದು ನನಗೆ ಗೊತ್ತಿಲ್ಲ. 10 ರಿಂದ 12 ನೇ ಪ್ರತಿವಾದಿಗಳು ಈ ದಾವೆಯಲ್ಲಿ ತಕರಾರು ಸಲ್ಲಿಸಿರುತ್ತಾರೋ ಇಲ್ಲವೋ ಎಂದು ನಾನು ತಿಳಿದುಕೊಂಡಿರುವುದಿಲ್ಲ. ನಮ್ಮ ಕಂಪನಿ ನೋಂದಾಯಿತ ದಾಖಲೆಗಳನ್ನು ನೋಡಿ ಸದರಿ ಸ್ವತ್ತುಗಳನ್ನು ಖರೀದಿಸಿರುತ್ತದೆ. ಆ ಬಗ್ಗೆ ದಿನಪತ್ರಿಕೆಯಲ್ಲಿ ಪ್ರಕಟಣೆ ಅಥವಾ ಜಾಹೀರಾತನ್ನು ತೆಗೆದುಕೊಂಡಿದ್ದೇವೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ವಾದಿಗೂ ದಾವಾ ಐಟಂ ಸಂಖ್ಯೆ 1 ರಿಂದ 4 ಕ್ಕೂ ಏನು ಸಂಬಂಧ ಎಂದರೆ ನನಗೆ ಗೊತ್ತಿಲ್ಲ. ವಾದಿ ಯಾರ ಮಗಳು, ಅವರ ಗಂಡನ ಹೆಸರು ಏನು ಹಾಗೂ ಯಾವ ದಾಖಲೆಗಳ ಆಧಾರದ ಮೇಲೆ ಅವರು ಹಕ್ಕು ಚಲಾಯಿಸುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಾರಾಯಣಮ್ಮ ಅವರ ಸಹೋದರ ಸಹೋದರಿಯರು ಎಷ್ಟು ಜನ ಎಂದು ನನಗೆ ಮಾಹಿತಿ ಇಲ್ಲ. ನಮಗೆ ಸಂಬಂಧಿಸಿದ ನಾಲ್ಕು ಸ್ವತ್ತುಗಳ ಹೊರತಾಗಿ ಬೇರೆ ಎಷ್ಟು ಸ್ವತ್ತುಗಳಿಗೆ ಈ ದಾವೆ ದಾಖಲಿಸಲಾಗಿದೆ ಎಂದು ನನಗೆ ಗೊತ್ತಿಲ್ಲ. ಯಾವ ದಾಖಲೆಯ

ಆಧಾರದ ಮೇಲೆ ವಾದಿ ಹಕ್ಕು ಚಲಾಯಿಸುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ. ವಾದಿ ಹಾಜರುಪಡಿಸಿರುವ ದಾಖಲೆಗಳ ಬಗ್ಗೆ ನನಗೆ ಮಾಹಿತಿ ಇಲ್ಲ. 3 ನೇ ಪ್ರತಿವಾದಿ ಯಾರು ಎಂದು ನನಗೆ ಗೊತ್ತಿಲ್ಲ. ನಾನು ಹಾಜರುಪಡಿಸಿರುವ ದಾಖಲೆಗಳನ್ನು 3 ನೇ ಪ್ರತಿವಾದಿಯ ಹೆಸರು ಎಲ್ಲಿಯೂ ಉಲ್ಲೇಖ ಆಗಿಲ್ಲ. 3 ನೇ ಪ್ರತಿವಾದಿ, ವಾದಿಗೂ ಮತ್ತು ಇತರೆ ಪ್ರತಿವಾದಿಗಳಿಗೂ ಏನು ಸಂಬಂಧ ಎಂದು ನನಗೆ ಗೊತ್ತಿಲ್ಲ. ನಾನು ಒಬ್ಬ ವಕೀಲ ಎಂದರೆ ಸರಿ. ನನಗೆ ಕಾನೂನಿನ ಅರಿವು ಇದೆ. ನಾನು ಕಂಪನಿ ಕಾನೂನಿನ ಬಗ್ಗೆ ಸಹ ತಿಳಿದುಕೊಂಡಿದ್ದೇನೆ. ಯಾವುದೇ ಕಂಪನಿಯ ಪರವಾಗಿ ಒಬ್ಬ ವ್ಯಕ್ತಿ ನ್ಯಾಯಾಲಯ ಅಥವಾ ಸರ್ಕಾರಿ ಕಛೇರಿಯಲ್ಲಿ ಹಾಜರಾಗಬೇಕಾದರೆ ಯಾವ ರೀತಿ ಹಾಜರಾಗಬೇಕು ಎಂದು ನನಗೆ ಗೊತ್ತು. ಕಂಪನಿಯಿಂದ ಅಧಿಕೃತ ನಿರ್ಣಯ ಹೊರಡಿಸದೇ ಯಾವುದೇ ಒಬ್ಬ ವ್ಯಕ್ತಿ ಕಂಪನಿಯ ಪರವಾಗಿ ನ್ಯಾಯಾಲಯ ಅಥವಾ ಸರ್ಕಾರಿ ಕಛೇರಿಯಲ್ಲಿ ಹಾಜರಾಗುವಂತಿಲ್ಲ ಎಂದರೆ ಸರಿ. ನಾನು ಈ ಪ್ರಕರಣದಲ್ಲಿ 13 ನೇ ಪ್ರತಿವಾದಿಯ ಪರವಾಗಿ ಹಾಜರಾಗಲು ಅಧಿಕಾರ ಪತ್ರವನ್ನು ನಮ್ಮ ವಕೀಲನಿಗೆ ನೀಡಿದ್ದು, ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೋ ಇಲ್ಲವೋ ಎಂದು ನೋಡಿ ಹೇಳಬೇಕು. ಕಂಪನಿಯ ಪರವಾಗಿ ಯಾವುದೇ ವ್ಯಕ್ತಿ ಅಧಿಕಾರ ಚಲಾಯಿಸಲು ಬೋರ್ಡ್ ತೆಗೆದುಕೊಳ್ಳುವ ನಿರ್ಣಯದ ಮೇಲೆ ಅವಲಂಬಿತವಾಗಿರುತ್ತದೆ. 13 ನೇ ಪ್ರತಿವಾದಿಯಿಂದ ಯಾವುದೇ ಅಧಿಕೃತ ನಿರ್ಣಯ ಇಲ್ಲದೆ ಹಾಗೂ ಯಾವುದೇ ದಾಖಲೆ ಇಲ್ಲದೇ ಈ ಪ್ರಕರಣದಲ್ಲಿ ನಾನು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಧಿಕೃತ ನಿರ್ಣಯ ತೆಗೆದುಕೊಂಡ ದಿನಾಂಕ ನನಗೆ ಗೊತ್ತಿಲ್ಲ. ನಾನು ಹಾಜರುಪಡಿಸಿದ ದಾಖಲೆಗಳನ್ನು ಕಡತದಲ್ಲಿ ಪರಿಶೀಲಿಸಿ ಅಂತಹ ಅಧಿಕೃತ ನಿರ್ಣಯದ ಪ್ರತಿಯನ್ನು ಹಾಜರುಪಡಿಸಿರುವುದಿಲ್ಲ ಎಂದು ಒಪ್ಪಿಕೊಳ್ಳುತ್ತೇನೆ. ನಾನು ಹಾಜರುಪಡಿಸಿದ ನಿ.ಡಿ.1 ರಿಂದ ನಿ.ಡಿ.8 ದಾಖಲೆಗಳ ಮೂಲ ಪ್ರತಿಗಳನ್ನು ಕಂಪನಿಯವರು ನನಗೆ ನೀಡಿರುವುದಿಲ್ಲ. ಸದರಿ ಮೂಲ ದಾಖಲಗೆಳು ಬ್ಯಾಂಕ್ ನಲ್ಲಿ ಇರುತ್ತವೆ. ಮೂಲ ದಾಖಲೆಗಳು ನಮ್ಮ ವಶದಲ್ಲಿ ಇಲ್ಲದ ಬಗ್ಗೆ ನಮ್ಮ ಲಿಖಿತ

ಹೇಳಿಕೆಯಲ್ಲಿ ತಿಳಿಸಲಾಗಿದೆಯೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ನಾನು ಹಾಜರುಪಡಿಸಿದ ದಾಖಲೆಗಳು ದೃಢೀಕೃತ ಪ್ರತಿಗಳ ಜೆರಾಕ್ಸ್ ಪ್ರತಿಗಳಾಗಿದ್ದು ಅವು ಅಧಿಕೃತ ದಾಖಲೆಗಳು ಅಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ಸಂಖ್ಯೆ 1 ರಿಂದ 4 ರ ಮೂಲ ದಾಖಲೆಗಳು ಈಗ ಬ್ಯಾಂಕ್‌ನ ವಶದಲ್ಲಿವೆ. ವಾದಿಯ ಕುಟುಂಬಕ್ಕೆ ಸಂಬಂಧಿಸಿದಂತೆ ಯಾವುದೇ ಮೂಲ ದಾಖಲೆಗಳು ನಮ್ಮ ವಶದಲ್ಲಿ ಇಲ್ಲ ಎಂದರೆ ಸರಿ. 10 ರಿಂದ 12 ನೇ ಪ್ರತಿವಾದಿಗಳು ವಾದಿಯ ಕುಟುಂಬದವರಿಂದ ಮೂಲ ದಾಖಲೆಗಳನ್ನು ಪಡೆದುಕೊಂಡಿದ್ದರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ದಾವಾ ಐಟಂ ಸಂಖ್ಯೆ 1 ರಿಂದ 4 ದಿ.23-12-2003 ರಲ್ಲಿ ಆದ ವಿಭಾಗ ಪತ್ರದ ಪ್ರಕಾರ ಬಂದಿರುವ ಸ್ವತ್ತುಗಳು. ಸದರಿ ಸ್ವತ್ತುಗಳು ಮೂಲತಃ ಆಂಜಿನಪ್ಪ ಅವರ ಸ್ವಯಾರ್ಜಿತ ಸ್ವತ್ತುಗಳು. ಆ ಬಗ್ಗೆ ಕಾನೂನು ಅಭಿಪ್ರಾಯ ಪಡೆದು ಸದರಿ ಸ್ವತ್ತುಗಳನ್ನು ನಾವು ಖರೀದಿಸಿರುತ್ತೇವೆ. 2003 ರ ವಿಭಾಗ ಪತ್ರಕ್ಕೆ ವಾದಿ ಭಾಗಿದಾರರೋ ಅಲ್ಲವೋ ಎಂದು ನನಗೆ ಗೊತ್ತಿಲ್ಲ. ಆಂಜಿನಪ್ಪ ಅವರ ಜೀವಿತಾವಧಿಯಲ್ಲಿ ಏನೆಲ್ಲಾ ವ್ಯವಹಾರಗಳನ್ನು ಮಾಡಿರುತ್ತಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಅವರು ತಮ್ಮ ಜೀವಿತಾವಧಿಯಲ್ಲಿ ದಾವಾ ಐಟಂ ಸಂಖ್ಯೆ1 ರಿಂದ 4 ಬಗ್ಗೆ ಯಾವುದೇ ವ್ಯವಹಾರಗಳನ್ನು ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿ.ಡಿ.2 ಕ್ಕೆ ಆಂಜಿನಪ್ಪ ಅವರು ಭಾಗಿದಾರರೋ ಅಥವಾ ಸಹಿದಾರರೋ ಎಂದು ನನಗೆ ಗೊತ್ತಿಲ್ಲ. ಸದರಿ ಪತ್ರಕ್ಕೆ ಆಂಜಿನಪ್ಪ ಅವರ ಎಲ್ಲಾ ವಾರಸುದಾರರು ಭಾಗೀದಾರರಾಗಿರುತ್ತಾರೆ. ನಿ.ಡಿ.2 ಕ್ಕೆ ವಾದಿ ಭಾಗಿದಾರರೋ ಅಲ್ಲವೋ ಎಂದು ನನಗೆ ಗೊತ್ತಿಲ್ಲ. ಆಂಜಿನಪ್ಪ ಅವರಿಂದ ಬಂದ ಯಾವುದೇ ಸ್ವತ್ತು ವಾದಿಯ ವಶದಲ್ಲಿ ಇದೆಯೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಆಂಜಿನಪ್ಪ ಅವರ ಸ್ವಯಾರ್ಜಿತ ಆಸ್ತಿಯಲ್ಲಿ ವಾದಿಗೆ ಏಕೆ ಭಾಗ ಕೊಟ್ಟಿಲ್ಲ ಎಂದು ನಾನು ತಿಳಿದುಕೊಂಡಿರುವುದಿಲ್ಲ. ದಿ.23-12-2003 ರ ವಿಭಾಗ ಪತ್ರವನ್ನು ವಾದಿ ಪ್ರಶ್ನಿಸಿರುವುದಿಲ್ಲ. ನಿ.ಪಿ.18 ಮತ್ತು ನಿ.ಪಿ.19 ರ ಬಗ್ಗೆ ನನಗೆ ಮಾಹಿತಿ ಇಲ್ಲ. ಆಂಜಿನಪ್ಪ

ಅವರಿಂದ ಅವರ ವಾರರಸುದಾರರಿಗೆ ನಿ.ಡಿ.2 ರ ಆಧಾರದ ಮೇಲೆ ಖಾತೆ ಬದಲಾವಣೆ ಆಗಿರುತ್ತದೆ.

**(ವಾದಿಗಳ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೋರಿರುವುದರಿಂದ, ಕಾಲಾವಕಾಶವನ್ನು ನೀಡಿ, ಪ್ರಕರಣವನ್ನು ಮುಂದೂಡಲಾಯಿತು).**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿಕೊಂಡಿರುತ್ತಾರೆ,

Sd/-
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**